MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 29-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## 2021–22 ರಲ್ಲಿ ಭಾರತದ ಸಕ್ಕರೆ ಉತ್ಪಾದನೆ 2.90 ಶೇಕಡಾ ಹೆಚ್ಚಳ

ಭಾರತ ಸಕ್ಕರೆ ಉತ್ಪಾದನೆ 2021–22 ರಲ್ಲಿ 2.90 ಶೇಕಡಾ ಹೆಚ್ಚಳವಾಗಿ 31.9 ಮಿಲಿಯನ್ ಟನ್ ಗಳಾಗಬಹುದೆಂದು ಸಕ್ಕರೆ ವ್ಯಾಪಾರಿಗಳ ಒಕ್ಕೂಟ AISTA ಅಂದಾಜಿಸಿದೆಯೆನ್ನಲಾಗಿದೆ. 8.3 ಮಿಲಿಯನ್ ಟನ್ ಆರಂಭ ದಾಸ್ತಾನಿನೊಂದಿಗೆ ಒಟ್ಟು ಈ ವರ್ಷ 40.2 ಮಿಲಿಯನ್ ಟನ್ ಸಕ್ಕರೆ ಲಭ್ಯತೆಯಿದ್ದು ಬೇಡಿಕೆ 27 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ. ಈ ವರ್ಷದ ರಫ್ತು ಹಿಂದಿನ ವರ್ಷದ 7.2 ಮಿಲಿಯನ್ ಟನ್ ಗಳಿಗೆ ಬದಲಾಗಿ 6 ಮಿಲಿಯನ್ ಟನ್ ಗಳಾಗಬಹುದೆಂದು ಅಂದಾಜಿಸಲಾಗಿದೆ.

## ಮುಂದಿನ ತಿಂಗಳಲ್ಲಿ ಹೊಸ ಬೆಳೆ(ರಾಬಿ) ನೀರುಳ್ಳಿ ಆವಕ ಪ್ರಾರಂಭ

ಮುಂದಿನ ತಿಂಗಳಲ್ಲಿ ಫೆಬ್ರವರಿ ಮಧ್ಯ ಭಾಗದ ನಂತರ ರಾಬಿ ಬೆಳೆಯ ಹೊಸ ನೀರುಳ್ಳಿ ಆವಕ ಪ್ರಾರಂಭವಾಗಬಹುದೆಂದು ಹೇಳಲಾಗಿದೆ. ಈಗ ಪೂರೈಕೆ ಉತ್ತಮವಿದ್ದರೂ ನೀರುಳ್ಳಿ ದರ ದೇಶೀ ಹಾಗೂ ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಳವಿದೆ. ಭಾರತೀಯ ಮೂಲದ ನೀರುಳ್ಳಿ ದರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇತರ ದೇಶಗಳಾದ್ಯಂತ ಹೆಚ್ಚಳವಿದೆ. ಹೊಸ ಬೆಳೆಯ ಆವಕದ ನಂತರ ದರ ಇಳಿಕೆಯಾಗುವ ಸಾಧ್ಯತೆಯಿದ್ದು ಅಂತರಾಷ್ಟ್ರೀಯವಾಗಿ ಭಾರತದ ನೀರುಳ್ಳಿ ದರ ಸ್ಪರ್ಧಾತ್ಮಕವಾಗುವ ಸಾಧ್ಯತೆಯಿದೆ.